**ಕನ್ನಡ ವೇದಿಕೆ**

**ಎಸ್.ಸಿ.ಎಸ್, ಜೈನ್ ವಿಶ್ವವಿದ್ಯಾಲಯ,**

**ಜಯನಗರ, ಬೆಂಗಳೂರು.**

**ದಿನಾಂಕ: 12–09–2019**

# ಬೆಂಗಳೂರಿನ ಜಯನಗರದ ಜೈನ್ ವಿಶ್ವವಿದ್ಯಾಲಯದ ಕನ್ನಡ ವೇದಿಕೆಯ 'ಜಿನಚೇತನ' ರಂಗತಂಡದಿಂದ 'ಆಕಾಶಭೇರಿ' ನಾಟಕ ಪ್ರದರ್ಶನ

ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ನೂರು ವರ್ಷಗಳ ಸ್ಮರಣೆಗಾಗಿ ಹಾಗೂ ಭಗತ್‌ಸಿಂಗ್‌ನ 112ನೇ ಜನ್ಮದಿನದ ಸವಿನೆನಪಿಗಾಗಿ ಜಯನಗರದ ಜೈನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಾಮರ್ಸ್‌ನ ಕನ್ನಡ ವೇದಿಕೆಯ "ಜಿನಚೇತನ ರಂಗ"ತಂಡವು ದಿನಾಂಕ 12–09–2019 ಗುರುವಾರದ ಅಂದು ಎ ಡಿ ಎ ರಂಗಮಂದಿರದಲ್ಲಿ "ಆಕಾಶಭೇರಿ" ನಾಟಕವನ್ನು ಅಭಿನಯಿಸಿತು. ನವಭಾರತ ಕಟ್ಟುವಲ್ಲಿ, ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸುವಲ್ಲಿ ಇಂದಿನ ಯುವಕರಿಗೆ ಸ್ಫೂರ್ತಿ ಮತ್ತು ಪ್ರೇರಣೆಯನ್ನು ನೀಡುವ ಆಶಯ ಹೊಂದಿದೆ. ಜಿನಚೇತನ ರಂಗತಂಡ ಕೆಚ್ಚೆದೆಯ ಹೋರಾಟಗಾರನಾದ ಭಗತ್‌ಸಿಂಗ್‌ನ ಜೀವನ ಚಿತ್ರಣವನ್ನು ಹಾಗೂ 1919ರಲ್ಲಿ ಪಂಜಾಬ್‌ದ ಅಮೃತಸರದಲ್ಲಿ ಜರುಗಿದ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಪರಿಣಾಮಗಳನ್ನು ಅತ್ಯಂತ ಮನೋಜ್ಞವಾಗಿ ಅಭಿನಯಿಸಿತು.

ಈ ನಾಟಕ ಪ್ರದರ್ಶನದಲ್ಲಿ ಸುಮಾರು ನಾಲ್ಕು ನೂರು ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಂಡಿದ್ದರು. ಮುಖ್ಯ ಅತಿಥಿಗಳಾಗಿ ಖ್ಯಾತ ರಂಗನಟರು, ರಂಗನಿರ್ದೇಶಕರಾದ ಡಾ.ಬಿ ವಿ ರಾಜಾರಾಮ್ ಪಾಲ್ಗೊಂಡು ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಪ್ರತಿಭೆ ಹೇರಳವಾಗಿದೆ, ಗಟ್ಟಿಯಾಗಿದೆ. ಅದನ್ನು ಸಮಾಜಮುಖಿಗೊಳಿಸಲು ಕನ್ನಡ ವೇದಿಕೆಯ ಜಿನಚೇತನ ರಂಗತಂಡ ಕಟ್ಟಿರುವುದು ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆಯಾಗಿದೆ ಎಂದು ಹೇಳಿದರು. ಜೈನ್ ಸಮೂಹ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷರಾದ ಶ್ರೀ ರವೀಂದ್ರ ಭಂಡಾರಿ, ಜೈನ್ ವಿಶ್ವವಿದ್ಯಾಲಯದ ದೂರ ಶಿಕ್ಷಣದ ನಿರ್ದೇಶಕರಾದ ಡಾ.ಬಿ ಟಿ ವೆಂಕಟೇಶ, ವಿದ್ಯಾರ್ಥಿಕ್ಷೇಮ ನಿಕಾಯ ಡೀನ್‌ರಾದ ಡಾ.ರಜನಿ ಜಯರಾಮ, ಸ್ಕೂಲ್ ಆಫ್ ಕಾಮರ್ಸ್‌ನ ನಿರ್ದೇಶಕರಾದ ಡಾ.ಬಿ ಎ ವಾಸು, ವಿ ವಿ ಪುರಂನ ಜೈನ್ ಸಂಜೆ ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ.ಶ್ರೀನಿವಾಸಯ್ಯ ಹಾಗೂ ಜೈನ್ ವಿಶ್ವವಿದ್ಯಾಲಯದ ವಿವಿಧ ವಿಭಾಗದ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.

ಶಶಿಧರ ಭಾರಿಘಾಟ್ ಆಕಾಶಭೇರಿ ನಾಟಕವನ್ನು ನಿರ್ದೇಶಿಸಿದರು. ಕಿರಣ ಸಹ ನಿರ್ದೇಶನ ನೀಡಿದರು. ಸಂಗೀತ ಸಂಯೋಜನೆ ಶ್ರೀ ಗಜಾನನ ನಾಯ್ಕ ವಹಿಸಿಕೊಂಡಿದ್ದರು. ಡಾ.ಹೆಚ್ ವಿ ವೇಣುಗೋಪಾಲ ನಾಟಕಕ್ಕೆ ಹಾಡುಗಳನ್ನು ಒದಗಿಸಿದ್ದರು. ರಂಗಸಜ್ಜಿಕೆ ಕೇಶವಮೂರ್ತಿಯವರದ್ದಾಗಿತ್ತು. ಕನ್ನಡ ವಿಭಾಗದ ಮುಖ್ಯಸ್ಥರಾದ ರಾಜೇಶ್ವರಿ ವೈ ಎಂ ಕಾರ್ಯಕ್ರಮ ನಿರೂಪಿಸಿದರು. ನಾಟಕದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಹಾಗೂ ನಿರ್ದೇಶಕರಿಗೆ ಡಾ. ಬಿ ಎ ವಾಸು ಅವರಿಂದ ಸ್ಮರಣಿಕೆಗಳನ್ನು ನೀಡಲಾಯಿತು.

ಸಂಯೋಜನೆ
ರಾಜೇಶ್ವರಿ ವೈ ಎಂ















